


ಬ್ಯಾಂಕ್ ಗ್ರಾಹಕ: ಏನ್ ಸಾರ್... ನಿಮ್ಮ ಬ್ಯಾಂಕ್ ಮಹಾ ಮೋಸ... ಭಾನುವಾರ ಹಾಗೂ ರಜಾ ದಿನಗಳಂದೂ ನೀವು ಬಡ್ಡಿ ಹಾಕ್ತೀರಾ... ರಜಾ ದಿನಗಳಲ್ಲಿ ಬ್ಯಾಂಕ್ ಮುಚ್ಚಿದ್ದರೂ ಬಡ್ಡಿ ಹಾಕುವುದು ತೀರಾ ಅನ್ಯಾಯ ಸಾರ್!

ಮ್ಯಾನೇಜರ್: (ಗ್ರಾಹಕನ ವಾದವನ್ನು ಶಾಂತವಾಗಿ ಆಲಿಸಿ) 'ಸಾರ್... ನೀವು ಭಾನುವಾರ ಸೇರಿದಂತೆ ಉಳಿದ ರಜಾ ದಿನಗಳಲ್ಲಿ ಊಟ ಮಾಡ್ತೀರಲ್ಲ... ಆ ದಿನ ಸ್ವಲ್ಪ ಹೆಚ್ಚಾಗಿಯೇ ತಿನ್ನುತ್ತೀರಿ. ಏಕೆಂದರೆ ಅವತ್ತು ವಿಶೇಷ ಕೂಡ ಇರುತ್ತೆ. ಆದರೆ ನಾವು ಮಾತ್ರ ಬಡ್ಡಿ ಹೆಚ್ಚಿಗೆ ಹಾಕುವುದಿಲ್ಲ.'

ಸಂಗ್ರಹ: ರಮಾನಂದ ಶರ್ಮಾ

ಸ್ಕೂಲ್ ಕಾರ್ಯಕ್ರಮದಲ್ಲಿ ಎಲ್‌ಕೆಜಿ ಹುಡುಗಿಯೊಬ್ಬಳು ಮಾತನಾಡಲು ಸ್ಟೇಜ್ ಹತ್ತಿದಳು, ಕೂಡಲೇ ಆಕೆಯ ಕ್ಲಾಸಿನಲ್ಲಿ ಓದುತ್ತಿದ್ದ ಗುಂಡ ಕಿವಿ ಮುಚ್ಚಿಕೊಂಡ.

ಸಂತ: ಯಾಕೋ ಕಿವಿ ಮುಚ್ಚಿಕೊಂಡೆ?

ಗುಂಡ: ಅವಳು ನನ್ನ ಲವರ್ ಕಣೋ ಮಚ್ಚಾ!

ಸಂತ: ಅದಕ್ಕೇನಂತೆ?

ಗುಂಡ: ಅವಳು ಭಾಷಣ ಮಾಡುವಾಗ 'ಪ್ರೀತಿಯ ಅಕ್ಕ–ತಂಗಿಯರೇ, ಅಣ್ಣ– ತಮ್ಮಂದಿರೇ' ಎಂದು ಮಾತನಾಡುತ್ತಾಳೆ ಅದಕ್ಕೆ.

★★★



ಆನೆ: ನಾನು ನಿನ್ನನ್ನು ಪ್ರೀತಿಸುತ್ತಿದ್ದೇನೆ ಕಣೇ..!

ಇರುವೆ: ಬೇಡ ಕಣೋ, ನನ್ನ ಮರೆತು ಬಿಡು

ಆನೆ: ಯಾಕೆ?

ಇರುವೆ: ನಮ್ಮ ಮನೆಯಲ್ಲಿ ಇಷ್ಟು ದೊಡ್ಡ ಸಂಬಂಧ ಒಪ್ಪಲ್ಲ!

ಸಂಗ್ರಹ: ಚೈತ್ರಾ ಕುಕ್ಕೆಮನೆ



ಮಿಸ್: ಬಂಟಾ ಇವತ್ತು ನೀನು ಏನಾದರೂ ಒಳ್ಳೆಯ ಕೆಲಸ ಮಾಡಿದೆಯಾ?

ಬಂಟಾ: ಹೌದು ಮೇಡಂ, ನಾನು ನನ್ನ ಐದು ಗೆಳೆಯರ ಸಹಾಯದಿಂದ ಒಬ್ಬ ವೃದ್ಧೆಗೆ ರಸ್ತೆ ದಾಟಲು ಸಹಾಯ ಮಾಡಿದೆ.

ಮಿಸ್: ಅಷ್ಟು ಚಿಕ್ಕ ಕೆಲಸಕ್ಕೆ ನಿನಗೆ ಐವರ ಸಹಾಯ ಏಕೆ ಬೇಕಾಯಿತು?

ಬಂಟಾ: ಏಕೆಂದರೆ ಆ ಮಹಿಳೆ ರಸ್ತೆ ದಾಟಲು ನಿರಾಕರಿಸುತ್ತಿದ್ದಳು.

★★★

ಶರ್ಮಾನ ಹೆಂಡತಿ ತನ್ನ ಗಂಡನ ಕೊಲೆ ಮಾಡಿದ್ದಳು. ಕೋರ್ಟಿನಲ್ಲಿ ವಿಚಾರಣೆ ನಡೆದು ನ್ಯಾಯಾಧೀಶರು ಅವಳಿಗೆ ಗಲ್ಲು ಶಿಕ್ಷೆಯ ತೀರ್ಪು ನೀಡಿದರು. ಆಗ ಅವಳು ನ್ಯಾಯಾಧೀಶರನ್ನು ಕುರಿತು 'ಸ್ವಾಮಿ, ನನಗೆ ಶಿಕ್ಷೆಯಲ್ಲಿ ಸ್ವಲ್ಪ ರಿಯಾಯ್ತಿ ತೋರಿ. ಏಕೆಂದರೆ, ನಾನು ವಿಧವೆ ಎಂದಳು.'

★★★

ಪ್ರಶ್ನೆ: ಸಾಮಾನ್ಯ ಮನುಷ್ಯನಿಗೂ ಸೂಪರ್‌ಮ್ಯಾನ್‌ಗೂ ಇರುವ ವ್ಯತ್ಯಾಸವೇನು?

ಉತ್ತರ: ಸಾಮಾನ್ಯ ಮನುಷ್ಯ ಒಳ ಉಡುಪನ್ನು ಪ್ಯಾಂಟಿನ ಒಳಗೆ ಧರಿಸಿದರೆ ಸೂಪರ್‌ಮ್ಯಾನ್ ಹೊರಗೆ ಧರಿಸುತ್ತಾನೆ.

★★★

ಮಂಟಾ: (ಒಬ್ಬ ಮಹಿಳೆಯನ್ನು ಕುರಿತು) ನೀವು ನನ್ನ ಮೂರನೆಯ ಹೆಂಡತಿಯ ಹಾಗೆ ಕಾಣುತ್ತೀರಿ.

ಮಹಿಳೆ: 'ಹಾಗಾದರೆ ನಿಮಗೆ ಎಷ್ಟು ಮದುವೆಗಳಾಗಿವೆ?'

ಮಂಟಾ: 'ಎರಡು.'

ಸಂಗ್ರಹ: ಮುರಲೀಧರ ಕುಲಕರ್ಣಿ

